ಅಂತಹ ಯಜ್ಞ ಮಾಡಿದರೂ ಫಲಿತಾಂಶ ದಕ್ಕದೇ ಹೋಗಲು ಕಾರಣ ಮತ್ತೆ ನಾನು, ಸುಬ್ಬರಾಜು, ನಾವಿಬ್ಬರೇ.

ಅದೊಂದು ದೊಡ್ಡ ಕಥೆ.

ತಿರುಪತಿಯಲ್ಲಿ ಫ್ಯಾಕ್ಟರಿ. ನಾವಿದ್ದುದು ವಿಜಯವಾಡ. ಅದಕ್ಕೇ ಸುಬ್ಬರಾಜು ತನ್ನ (ಎರಡನೇ ಹೆಂಡತಿಯ) ಮಗಳನ್ನು ಆಫೀಸ್ ಸೆಕ್ರೆಟರಿಯಾಗಿ ನೇಮಿಸಿದರು. ಇಂತಹ ವಿಷಯದಲ್ಲಿ ನಾನು ಬಹಳ ಬುದ್ಧಿವಂತ. ನನ್ನ ಮನುಷ್ಯರೂ ಒಬ್ಬರಿರಬೇಕೆಂದುಕೊಂಡು ನನ್ನ ಮದುವೆಗೆ ಮುಂಚಿನ ಗೆಳತಿಯ ಮಗನನ್ನು ಖಜಾಂಚಿಯಾಗಿ ನೇಮಿಸಿದೆ.

ಒಬ್ಬರ ಮೇಲೆ ಒಬ್ಬರು ನಿಗಾ ಇಡುವವರೆಂಬುದು ನಮ್ಮ ಉದ್ದೇಶವಾಗಿತ್ತು.

ಆದರೆ ಅವರಿಬ್ಬರೂ ಒಬ್ಬರ ಮೇಲೊಬ್ಬರು ನಿಗಾ ಇಡುವುದನ್ನು ಬಿಟ್ಟು, ಒಬ್ಬರನ್ನೊಬ್ಬರು ಪ್ರೇಮಿಸಿ, ಈ ಒಂದು ವರ್ಷದಲ್ಲಿ ಇಬ್ಬರೂ ತಲಾ ಇಪ್ಪತ್ತೈದು ಲಕ್ಷ ತಿಂದು, ಆ ನಂತರ ತಿರುಪತಿ ಬೆಟ್ಟದ ಮೇಲೆ ಮದುವೆ ಮಾಡಿಕೊಂಡರು. ಗಾಯದ ಮೇಲೆ ಬರೆ ಎಳೆದಂತೆ ಬಂದ ಅತಿಥಿಗಳಿಗೆ ಬೆಟ್ಟದ ಮೇಲೆ ನಮ್ಮ ಬಾಚಣಿಗೆ ಹಂಚಿದರು. ಆ ರೀತಿಯಲ್ಲಿ ಒಂದು ವರ್ಷದಲ್ಲಿ ನಮ್ಮ ವ್ಯಾಪಾರ ಅಟ್ಟ ಸೇರಿತು.

ಹಣವಿದ್ದುದರಿಂದ ಆತನಿಗೇನೂ ನಷ್ಟ ದೊಡ್ಡದಾಗಿ ಕಾಣಿಸಲಿಲ್ಲ. ನಾನು ಮುಳುಗಿಹೋದೆ.

ನಿಜವೇ. ವ್ಯಾಪಾರದಲ್ಲಿ ನಷ್ಟ ಉಂಟಾಯಿತು. ಕರ್ಮ ನನ್ನ ಹಣೆಬರಹದಲ್ಲಿ ಹಾಗೆ ಬರೆದಿತ್ತು. ವ್ಯಾಪಾರ ಅಂದ ಮೇಲೆ ಲಾಭವೂ ಬರಬಹುದು. ನಷ್ಟವೂ ಆಗಬಹುದು. ಅನುಭವವಿಲ್ಲದಿದ್ದುದರಿಂದ ಸೋತುಹೋದೆವು. ಇಷ್ಟು ಚಿಕ್ಕ ವಿಷಯವನ್ನು ನನ್ನ ಮಗಳು, ಹೆಂಡತಿ ಯಾಕೆ ಅರ್ಥ ಮಾಡಿಕೊಳ್ಳೋದಿಲ್ಲ? ಗೆಲುವಿನ ಮೊದಲ ಮೆಟ್ಟಿಲು ಸೋಲು ಎಂದು ಎಲ್ಲ ಕ್ಷೇತ್ರಗಳಲ್ಲಿ ಸೋತು ಹೋಗಿ ವ್ಯಕ್ತಿತ್ವವಿಕಾಸಕ್ಕೆ ಬಂದ ನಿಪುಣನಾರೋ ಹೇಳಿದ್ದಾನಲ್ಲವಾ? ಆದರೆ ಇಲ್ಲಿ ನಡೆದಿದ್ದೇನೆಂದರೆ ಸೋಲು ನನ್ನ ಮೊದಲ ಮೆಟ್ಟಿಲಲ್ಲ. ಕೊನೆಯ ಮೆಟ್ಟಿಲು. ಯಾಕೆಂದರೆ ಇನ್ನು ಗೆಲ್ಲಲು ಹಣವೂ ಇಲ್ಲ. ಸ್ಥೈರಣೆಯೂ ಇಲ್ಲ. ಇನ್ನು ಒಂದೇ ಒಂದು ಕೊನೆಯ ಮೆಟ್ಟಿಲು. ಚಟ್ಟ.

"ಇಷ್ಟು ಗುಡಿ ಗೋಪುರ ತಿರುಗ್ತಾ ಇರ್ತೀಯಲ್ಲಾ? ಯಾವ ದೇವರೂ ನಿನ್ನನ್ನು ಯಾಕೆ ರಕ್ಷಿಸಲಿಲ್ಲ?" ಕೇಳಿದಳು ನನ್ನ ಹೆಂಡತಿ.

"ಇಷ್ಟು ದೇವರುಗಳ ದಯೆ ಇದ್ದಿದ್ದರಿಂದಲೇ ಸ್ವಂತ ಮನೆ ಮಾರದೇ, ಇಷ್ಟರಲ್ಲೇ ಎಲ್ಲಾ ಮುಗಿಯಿತು" ಎಂದೆ.

"ಮತ್ತೆ ಫ್ಯಾಕ್ಟರಿ ಯಾಕೆ ಹೋಯಿತು?" ಎಂದಳು ನನ್ನ ಮಗಳು. ಹಿಂದಿನ ಜನ್ಮದಲ್ಲಿ ನಾನು ಮದ್ದಳೆ ಬಾರಿಸುವವನಾಗಿದ್ದಿರಬೇಕು. ಅದರ ಶಾಪವೇ ಇದು. ಮದ್ದಳೆಯನ್ನೂ ಎರಡೂ ಕಡೆ ಬಡಬಡ ಬಡಿಯುತ್ತಾರೆ.

ಆದರೆ ನನ್ನಲ್ಲಿನ ವಿಶಿಷ್ಟ ಗುಣ ಏನೆಂದರೆ ಯಾವಾಗಲೂ ಸಂಯಮ ಕಳೆದುಕೊಳ್ಳುವುದಿಲ್ಲ.

"ಗ್ರಹಗಳು ಚೆನ್ನಾಗಿವೆ ಅಂತ ನಿಮ್ಮ ತಂದೆಯವರೇ ಹೇಳಿದ್ದರಲ್ಲವಾ?" ಎಂದೆ ಆತನನ್ನು ನನ್ನ ಕಡೆಗೆ ಸೇರಿಸಿಕೊಳ್ಳುತ್ತಾ.

"ಗ್ರಹಗಳು ಚೆನ್ನಾಗಿದ್ದರೆ ವಾಸ್ತು ಯಾಕೆ?" ಎಂದಳು ನನ್ನ ಮಗಳು.

"ಕರ್ಮವನ್ನು ಯಾರೂ ತಪ್ಪಿಸಿಕೊಳ್ಳಲಾರರು. ಏನು ಬರೆದಿದೆಯೋ ಅದೇ ನಡೆಯುತ್ತೆ" ಎಂದೆ.

"ಮತ್ತೆ ಹಾಗಿರುವಾಗ ಯಜ್ಞ ಯಾಗ ಯಾಕೆ?" ಎಂದಳು ನನ್ನ ಹೆಂಡತಿ.

"ಅದು ಕೂಡ ಕರ್ಮದಲ್ಲಿ ಬರೆದಿದೆ" ಎಂದೆ. ಆಗ ಅವಳು ನನ್ನತ್ತ ಬೀರಿದ ನೋಟವನ್ನು ನಾನೆಂದಿಗೂ ಮರೆಯಲಾರೆ.

ಈಗ ಆ ಗಲಾಟೆಯೆಲ್ಲಾ ಯಾಕೆ... ನನ್ನ ಸಮಸ್ಯೆ ಹೇಳುತ್ತೇನೆ.

ಪ್ರವಾಸಿ ಆಂಧ್ರರು ಭಾರತದೇಶ ಭಕ್ತರಿಗೆ... ಕ್ಷಮಿಸಿ. ಭಾರತದೇಶ ಭಕ್ತರಲ್ಲ. ಭಾರತದೇಶದಲ್ಲಿರುವ ದೈವಭಕ್ತರು. ಅವರಿಗೆ ಒಂದು ವಿನಂತಿ ಮಾಡಿದರು. "ಬರುವ ತಿಂಗಳು ಬರುವ ಶ್ರಾವಣ ಪೌರ್ಣಮಿ ರಾತ್ರಿ ರಾಯಲಸೀಮದ ಪವಿತ್ರ ಬೆಟ್ಟ ಹತ್ತಿ, ದೇವರಿಗೆ ಮತ್ತಷ್ಟು ಹತ್ತಿರವಾಗಿ ಹೋಗಿ ಅಲ್ಲಿ ಲಕ್ಷದೀಪಗಳನ್ನು ಬೆಳಗಿ ಭಕ್ತಿಯನ್ನು ಪ್ರದರ್ಶಿಸಬೇಕೆಂದೂ, ತಮ್ಮ ಅಧ್ಯಕ್ಷ ಅದನ್ನು ಬಂದು ನೋಡುವರೆಂದೂ... " ಒಂದು ಪ್ರಕಟಣೆ ನೀಡಿದರು.

ಇನ್ನೇನಿದೆ? ನಮ್ಮೆಲ್ಲರ ಹೃದಯ ವನದಲ್ಲಿ ಸಾವಿರಾರು ದೀಪಗಳು ಒಮ್ಮೆಲೇ ಬೆಳಗಿದವು. ಇಂತಹ ಅವಕಾಶವು ಕೇವಲ ಹನ್ನೆರಡು ವರ್ಷಗಳಿಗೊಮ್ಮೆ ಬರುತ್ತದೆ. ನಮ್ಮ ಗುಂಪಿನ ಹತ್ತು ಜನರು ಈಗ ಆ ಬೆಟ್ಟದ ಬಳಿಗೆ ಹೋಗಬೇಕು. ಹೋಗಲು, ಅಲ್ಲಿ ಉಳಿದುಕೊಳ್ಳಲು ಒಬ್ಬೊಬ್ಬರಿಗೆ ಸುಮಾರು ಇಪ್ಪತ್ತೈದು ಸಾವಿರದವರೆಗೂ ಖರ್ಚಾಗುತ್ತದೆ.

ಆ ಸಮಯದಲ್ಲೇ ನನ್ನ ಹೆಂಡತಿ ಅಡ್ಡ ಬಂದಳು.

"ಮದುವೆ ಆಗಿ ನಲವತ್ತು ವರ್ಷಗಳಲ್ಲಿ ತೀರ್ಥಯಾತ್ರೆಗೆ ಲಕ್ಷಗಟ್ಟಳೆ ಖರ್ಚು ಮಾಡಿದ್ದೀ. ಆಗ ಸ್ವಲ್ಪ ದುಡ್ಡಿರುತ್ತಿತ್ತು. ಈಗ ಪೈಸಾ ಕೂಡ ಇಲ್ಲ. ಈ ಪರಿಸ್ಥಿತಿಯಲ್ಲಿ ನೀನು ಅಷ್ಟು ದೂರ ಹೋಗಿ ದೀಪ ಹಚ್ಚದಿದ್ದರೆ ಏನಾದರೂ ನಷ್ಟ ಇದೆಯಾ?" ಎಂದು ನನ್ನ ಮೇಲೆ ಎಗರಿಬಿದ್ದಳು.

ನಾನು ಮಾತಾಡಲಿಲ್ಲ. ಏನಾದರೂ ಉತ್ತರ ಹೇಳಿದರೆ ಆ ಚರ್ಚೆ ಎಲ್ಲಿಯವರೆಗೆ ಹೋಗುವುದೆಂದು ನನಗೆ ತಿಳಿದಿತ್ತು.

ಅದಕ್ಕೇ ನಾನು ಮನೆಯಲ್ಲಿ ಹೆಚ್ಚು ಮಾತಾಡುವುದಿಲ್ಲ. ಹೀಗೆ ಮಾತಾಡದೇ ಇರುವುದಕ್ಕಾಗಿ ಹಿಂದೆ ಒಮ್ಮೆ ಏಕಾಗ್ರತ ನಿಶ್ಶಬ್ದ.ಕಾಮ್ ನವರಿಗೆ ಐವತ್ತು ಸಾವಿರ ಕಟ್ಟಿ ಬೆಂಗಳೂರಿಗೆ ಹೋದೆ. ಅಲ್ಲಿ ಒಂಟಿಯಾಗಿ ದಿನವೆಲ್ಲಾ ಯಾರೊಂದಿಗೂ ಮಾತಾಡದೇ ಇರಬೇಕು. ಉಪ್ಪು ಖಾರವಿಲ್ಲದೇ ಒಂದು ತಿಂಗಳ ಕಾಲ ಹಾಗೆ ಮೌನವಾಗಿದ್ದರೆ ಏಕಾಗ್ರತೆ ಹೆಚ್ಚಿ ಸಾಂತ್ವನ ಲಭಿಸುತ್ತದೆ.

ವ್ಯಾಪಾರದಿಂದ ಉಂಟಾದ ನಷ್ಟದ ನೋವನ್ನು ದೂರ ಮಾಡಿಕೊಳ್ಳುವುದಕ್ಕಾಗಿ ಅಲ್ಲಿಗೆ ಹೋದೆ. ನನ್ನ ಹೆಂಡತಿ ಅರ್ಥ ಮಾಡಿಕೊಳ್ಳಲಿಲ್ಲ.

"ಯಾರೊಂದಿಗೂ ಮಾತಾಡದೇ ಇರೋಕ್ಕೆ ಐವತ್ತು ಸಾವಿರವಾ? ನಿನಗೇನಾದರೂ ಬುದ್ಧಿ ಇದೆಯಾ? ಮನೆಯಲ್ಲೇ ಯಾರೊಂದಿಗೂ ಮಾತಾಡದೇ ಇರಬಹುದಲ್ವಾ?" ಎಂದಳು. ಮಳೆ ಬಂದರೂ, ಚಂಡಮಾರುತ ಮೇಲೆದ್ದರೂ ಆಕಾಶವಾಣಿ ಕಾರ್ಯಕ್ರಮ ಬೆಳಗ್ಗೆಯೇ ಆರಂಭವಾಗುತ್ತದೆ.

"ಊಟ, ಇರೋಕ್ಕೆ ಜಾಗ ಎಲ್ಲ ಸೇರಿ" ಎಂದೆ ಅರ್ಥ ಮಾಡಿಸುವಂತೆ.

"ಏನು? ಆ ಎಲೆ ಕಾಯಿಗಳಿಗಾ?" ಎಂದಳು.

"ಶ್ವಾಸದ ಮೇಲೆ ಕೇಂದ್ರೀಕರಿಸುವಿಕೆಗೆ" ಎಂದೆ.

"ಶ್ವಾಸದ ಮೇಲಿನ ಕೇಂದ್ರೀಕರಿಸೋಕ್ಕೆ ಬೆಂಗಳೂರು ಯಾಕೆ? ಬಾತ್‌ರೂಮಿನಲ್ಲಿ ಏನು ಮಾಡ್ತೀ? ಅಲ್ಲಿ ಮಾಡು ನಿನ್ನ ಕೇಂದ್ರೀಕರಿಸುವಿಕೆಯನ್ನು" ಎಂದಳು. ಈಕೆ ವಿಶ್ವಸಂಸ್ಥೆಯಲ್ಲಿ ವಾದಿಸಿದ್ದರೆ, ಕಾಶ್ಮೀರ ಯಾವಾಗಲೋ ನಮ್ಮದಾಗಿರುತ್ತಿತ್ತು.

ನನ್ನ ಹೆಂಡತಿಗೆ ಇಂಗ್ಲಿಷ್ ಬರುವುದಿಲ್ಲ. ಅದಕ್ಕೆ ಇಂಗ್ಲಿಷ್‌ನಲ್ಲಿ ಹೊಡೆಯಬೇಕೆಂದುಕೊಂಡೆ. "ಮೌನವು ಮಹಾ ಧ್ಯಾನ. ಇಂಗ್ಲಿಷ್‌ನಲ್ಲಿ ಮೆಡಿಟೇಷನ್ ಅಂತಾರೆ. ಹಾಗೆ ಮಾಡುವುದರಿಂದ ಏಕಾಗ್ರತೆ ಹೆಚ್ಚುತ್ತದೆ. ನಿನಗರ್ಥ ಆಗಲ್ಲ ಬಿಡು"

ಆಕೆಯೇನೂ ಅದಕ್ಕೆ ಬಗ್ಗಲಿಲ್ಲ. "ನಿಜವೇ. ಆದರೆ ನನಗೆ ಅರ್ಥ ಆಗದಿರೋದ್ರಿಂದ ಕೇಳ್ತಿದ್ದೀನಿ. ಯಾವುದೇ ಕೆಲಸ ಮಾಡಿದರೂ ಆ ಕೆಲಸದ ಮೇಲೆ ಶ್ರದ್ಧೆ ಇಡುವುದೇ ಅಲ್ಲವಾ ಧ್ಯಾನ ಎಂದರೆ? ಲೇಖಕರು ಬರೀತಾರೆ. ಪೆಯಿಂಟರುಗಳು ಚಿತ್ರ ಬರೆಯುತ್ತಾರೆ. ಅದೇ ಅಲ್ವಾ ಏಕಾಗ್ರತೆ ಅಂದರೆ. ಅದಕ್ಕೆ ಮಾತಾಡೋದನ್ನು ಬಿಡೋದು ಯಾಕೆ? ಎಲೆಗಳನ್ನು ತಿನ್ನೋದು ಯಾಕೆ? ಕೇವಲ ಇಷ್ಟು ಕೇಂದ್ರೀಕರಿಸುವಿಕೆ ಆ ತಿರುಪತಿ ಫ್ಯಾಕ್ಟರಿಯ ವ್ಯವಹಾರದಲ್ಲಿಟ್ಟಿದ್ದಿದ್ದರೆ ಅದೇ ಮೆಡಿಟೇಷನ್ ಆಗಿರುತ್ತಿತ್ತು ಅಲ್ವಾ"

ಲಾಭವಿಲ್ಲ. ಈ ನಿರಂತರ ಹೋರಾಟದಲ್ಲಿ ನಾನು ಎಂದಿಗೂ ಗೆಲ್ಲಲಾರೆ. ಇಲ್ಲ ಇಲ್ಲ. ಒಮ್ಮೆ ಗೆದ್ದಿದ್ದೆ. ನನ್ನಾಕೆಯನ್ನು ಒಪ್ಪಿಸಿ ಒಂದು ಪುಣ್ಯ ಪ್ರವಚನ ಸಭೆಗೆ ಕರೆದೊಯ್ದಿದ್ದೆ. ಯಾವ ಮೂಡ್‌ನಲ್ಲಿದ್ದಳೋ ಏನೋ, ಒಪ್ಪಿದಳು. ಜನರಿಂದ ತುಂಬಿಹೋಗಿತ್ತು ಆ ಸ್ಥಳ. ಸ್ವಾಮೀಜಿ ಒಂದು ಕಥೆಯೊಂದಿಗೆ ಉಪನ್ಯಾಸ ಪ್ರಾರಂಭಿಸಿದರು.

"ಕೋಟ್ಯಾಧೀಶ್ವರರಾದ ಒಂದು ಗುಜರಾತಿ ಕುಟುಂಬ ತಮ್ಮ ಮನೆಯಲ್ಲಿ ವಿವಾಹದ ನಿಮಿತ್ತವಾಗಿ ವಧುವಿನ ಅಲಂಕಾರಕ್ಕಾಗಿ ಬೊಂಬಾಯಿಯಿಂದ ವಿಶೇಷ ಮನುಷ್ಯನನ್ನು ಕರೆಸಿತು. ಆತ ಆ ಕ್ಷೇತ್ರದಲ್ಲಿ ನಿಷ್ಣಾತ. ಮೂರು ಗಂಟೆಗಳ ಮೇಕಪ್‌ಗಾಗಿ ಮೂವತ್ತು ಲಕ್ಷ ತೆಗೆದುಕೊಂಡ. ಆದರೂ ಸರಿ, ಆತನ ಸಮಯ ಮದುಮಗಳಿಗೆ ದೊರಕಿದ್ದೇ ಅದೃಷ್ಟ.

ಬೆಳಗ್ಗೆ ಹನ್ನೊಂದಕ್ಕೆ ಮದುವೆ. ಆರು ಗಂಟೆಗೆ ಪ್ರಾರಂಭ ಮಾಡಿ, ಒಂಬತ್ತಕ್ಕೆಲ್ಲಾ ಮೇಕಪ್ ಪೂರ್ತಿ ಮಾಡಿ, ಸಹಾಯಕರೊಂದಿಗೆ ಕಾರಿನಲ್ಲಿ